## ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ. 3266-2023

ಸಿ.ಡಬ್ಲ್ಯೂ-02
ಪಿ.ಡಬ್ಲ್ಯೂ-02

**ಸಾಕ್ಷಿಗೆ ದಿಃ 28.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರಃ ಶ್ರೀ J.N. ವಕೀಲರಿಂದಃ**

ಚಾಸಾ 1 ನನ್ನ ಸಂಬಂಧಿ ಆಗಬೇಕು. ಚಾಸಾ 5 ನನ್ನ ಗಂಡ. ಮನು ನನ್ನ ಸಹೋದರ ಆಗಿರುತ್ತಾನೆ. ಚಾಸಾ1 ಅವರ ತಮ್ಮ ರಾಮಚಂದ್ರಯ್ಯ ನನ್ನ ತಂದೆ ಆಗಬೇಕು. ಚಾಸಾ 4 ಅವರ ಮಗಳನ್ನು ನನ್ನ ಸಹೋದರನಿಗೆ ತೆಗೆದುಕೊಂಡಿರುತ್ತೇವೆ. ಯಾವ ಜಮೀನು ಸರ್ವೆ ನಂ ಗೆ ಸಂಬಂಧಿಸಿದಂತೆ ಗಲಾಟೆ ಆಗಿರುತ್ತದೆಂದು ನನಗೆ ಗೊತ್ತಿಲ್ಲ. ಆರೋಪಿ 1 ಅವರು ನನ್ನ ತಮ್ಮ ಮನು ಮತ್ತು ನನ್ನ ತಂದೆಯ ವಿರುದ್ದ ದೂರನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಘಟನಾ ಸ್ಥಳದ ಬಳಿ ನನ್ನ ಹೋಲದಲ್ಲಿ ಕೆಲಸ ಮಾಡುತ್ತಿದ್ದೇ. ಚಾಸಾ 1 ಅವರು ಜಮೀನಿನ ಅಕ್ಕಪಕ್ಕ ನನ್ನ ಜಮೀನು ಇದ್ದು ಅದರ ಸರ್ವೆ ನಂ ನನಗೆ ಗೊತ್ತಿಲ್ಲ. ಅದು ಗದ್ದೆ ಆಗಿರುತ್ತದೆ. ಗದ್ದೆಯಲ್ಲಿ ಏನು ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಮೂಲಗಳನ್ನು ಅಗೆದುಕೊಂಡು ಹುಲ್ಲು ಸ್ವಚ್ಚ ಮಾಡುತ್ತಿದ್ದು ಚಾಸಾ 1 ಎಮ್ಮೆ ದನಗಳನ್ನು ಕಟ್ಟಲು ಬಂದಿದ್ದರು. 4-5 ಎಮ್ಮೆ ದನಗಳು ಇದ್ದವು.

ನಮ್ಮ ಕುಟುಂಬದಲ್ಲಿ ನಾವು 4 ಜನ ಇದ್ದೇವೆ. ನನ್ನ ಮಕ್ಕಳು ವಿಧ್ಯಾಭ್ಯಾಸ ಮಾಡುತ್ತಿದ್ದಾರೆ. ನಾನು ಬೆಳಿಗ್ಗೆ ಎದ್ದು ಮಕ್ಕಳಿಗೆ ತಿಂಡಿ ಮಾಡಿಕೊಟ್ಟು ಮಕ್ಕಳನ್ನು ಕಳುಹಿಸಿ ನಂತರ ಜಮೀನಿನ ಬಳಿ ಹೋಗುತ್ತೇನೆ ಎಂದರೆ ಸರಿ. ಮಕ್ಕಳನ್ನು ಶಾಲೆಗೆ ಕಳುಹಿಸಿ ಹೋಗುವಷ್ಟರಲ್ಲಿ 9 – 10 ಗಂಟೆ ಆಗುತ್ತದೆ ಎಂದರೆ ಸರಿಯಲ್ಲ. ನಾನು ಮಕ್ಕಳನ್ನು ಶಾಲೆಗೆ ಕಳುಹಿಸಿ ಊಟ ತಿಂಡಿ ಮಾಡಿ ಹೋಗುವಷ್ಟದಲ್ಲಿ 9- 10 ಗಂಟೆ ಆಗುತ್ತದೆ ಮತ್ತು ಆ ದಿನ ಸ್ಥಳಕ್ಕೆ ಹೋಗಿರಲಿಲ್ಲವೆಂದರೆ ಸರಿಯಲ್ಲ. ನಾನು ಚಾಸಾ 1 ಅವರೊಂದಿಗೆ ಪೊ. ಠಾಣೆಗೆ ಹೋಗಿಲ್ಲ. ನಾನು ಪೊ. ಠಾಣೆಗೆ ಹೋಗಿ ಹೇಳಿಕೆ ನೀಡಿಲ್ಲ ಸ್ಥಳದಲ್ಲಿ ಬಂದಾಗ ನೀಡಿರುತ್ತೇನೆ. ಮಹಜರಗೆ ಯಾವ ದಿನಾಂಕದಂದು ಬಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಮಹಜರನಲ್ಲಿ ಏನು ಬರೆದಿದ್ದಾರಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಮಹಜರಗೆ ನನ್ನ ಜೊತೆ ಚಾಸಾ 3 ಮತ್ತು 5 ಸಹ ಸಹಿ ಮಾಡಿರುತ್ತಾರೆ. ಸ್ಥಳಕ್ಕೆ ಪೋಲಿಸರು ಬಂದಿಲ್ಲವೆಂದರೆ ಸರಿಯಲ್ಲ. ಪೋಲಿಸರು ಸ್ಥಳದಲ್ಲಿ ಯಾವುದೆ ಮು. ಮಾ. ಗಳನ್ನು ವಶಪಡಿಸಿಕೊಂಡಿಲ್ಲವೆಂದರೆ ಸರಿಯಲ್ಲ. ಚಾಸಾ 1 ನನ್ನ ಸೋದರ ಅತ್ತೆ ಆಗಿದ್ದು ಅವರು ಆರೋಪಿತರ ವಿರುದ್ದ ಸುಳ್ಳು ನೀಡಿದ್ದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಮತ್ತು ತಂದೆಯ ವಿರುದ್ದ 1 ನೇ ಆರೋಪಿ ದೂರು ನೀಡಿದ ಕಾರಣ ಚಾಸಾ 1 ಸುಳ್ಳು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೂ ಪ್ರಕರಣಕ್ಕೂ ಮು. ಮಾ. ಗೂ ಯಾವುದೇ ಸಂಬಂಧ ಇಲ್ಲವೆಂದರೆ ಸರಿಯಲ್ಲ.

ನಾನು 20.06.2023 ರಂದು ಗದ್ದೆ ಕೆಲಸಕ್ಕೆ ಹೋಗಿಲ್ಲ ಆ ದಿನ ಯಾವುದೇ ಗಲಾಟೆ ಆಗಿಲ್ಲವೆಂದರೆ ಸರಿಯಲ್ಲ. ಆರೋಪಿತರೂ ಮುಂದಲೆ ಹಿಡಿದುಕೊಂಡು ಕತ್ತಿನ ಹಿಂಬಾಗ ಹೊಡೆದಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 23.06.2020 ರಂದು ಪೋಲಿಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿಲ್ಲ ನಾನು ಪೊ. ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.